**ದಿಃ 21.09.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ನಾನು ನನ್ನ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳನ್ನು ನಾನು ಓದಿ ನೋಡಿರುತ್ತೇನೆ. ಮತ್ತು ನನ್ನ ಸಹಿಯನ್ನು ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ.

**ಮುಂದುವರೆದ ಮುಖ್ಯ ವಿಚಾರಣೆಃ- ಎದುರುದಾರರ ಪರ ವಕೀಲರಿಂದಃ**

ಎದುರುದಾರರು ನನಗೆ ಈ ಪ್ರಕರಣದಲ್ಲಿ ಸಾಕ್ಷವನ್ನು ನುಡಿಯಲು ನೀಡಿರುವಂತಹ ಅಧಿಕಾರ ದೃಢೀಕರಣ ಪತ್ರವನ್ನು ಹಾಜರು ಪಡಿಸುತ್ತಿದ್ದೇನೆ. ಅದನ್ನು ನಿಆರ್-1 ಎಂದು ಗುರುತು ಪಡಿಸಿಕೊಳ್ಳಲಾಯಿತು. ಈ ಅರ್ಜಿಗೆ ಸಂಬಂಧಪಟ್ಟಂತೆ ಎದುರುದಾರರು ಒಟ್ಟು ಜಮಾ ಮಾಡಿರುವ ಮೊತ್ತದ ಬಾಬ್ತು ದಾಖಲಾತಿಯನ್ನು ಹಾಜರು ಪಡಿಸುತ್ತಿದ್ದೇನೆ. ಅದನ್ನು ನಿಆರ್-2 ಎಂದು ಗುರುತು ಪಡಿಸಿಕೊಳ್ಳಲಾಯಿತು. ಈ ಪ್ರಸ್ತುತ ಅಪೀಲುದಾರರಿಗೆ ಪಾವತಿ ಮಾಡಬೇಕಾಗಿರುವಂತಹ ಲೆಕ್ಕಚಾರದ ತಖ್ತೆಯನ್ನು ಹಾಜರು ಪಡಿಸುತ್ತಿದ್ದೇನೆ. ಅದನ್ನು ನಿಆರ್-3 ಎಂದು ಗುರುತು ಪಡಿಸಿಕೊಳ್ಳಲಾಯಿತು.

**ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಮೈಸೂರು.**